# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲ ಪ್ರಶ್ನೆ ಸಂಖ್ಯೆ | : | 830 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.03.2025. |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಸೈಬರ್ ಅಪರಾಧ ಮತ್ತು ಆರ್ಥಿಕ ಅಪರಾಧ ಪ್ರಕರಣಗಳು ದಾಖಲಾಗಿವೆ: ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ:</td><td>
ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸೈಬರ್ ಅಪರಾಧಗಳ ಕುರಿತಂತೆ ಐಟಿ ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಮತ್ತು ಆರೋಪಿಗಳನ್ನು ಪತ್ತೆ ಹಚ್ಚಲಾಗಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:-<br><br>
ಐಟಿ ಕಾಯ್ದೆ (ಸೈಬರ್ ಅಪರಾಧಗಳು)
<table>
<tr><th>ವರ್ಷ</th><th>ವರದಿ</th><th>ಪತ್ತೆ</th></tr>
<tr><td>2022</td><td>12885</td><td>3546</td></tr>
<tr><td>2023</td><td>22224</td><td>5541</td></tr>
<tr><td>2024</td><td>22415</td><td>1841</td></tr>
</table>
ದಾಖಲಾಗಿರುವ ಆರ್ಥಿಕ ಅಪರಾಧಗಳು (Economic Offences) ಪ್ರಕರಣಗಳ ಸಂಖ್ಯೆ ಮತ್ತು ಆರೋಪಿಗಳು ಪತ್ತೆಯಾದ ಪ್ರಕರಣಗಳ ವಿವರಗಳು:-
<table>
<tr><th rowspan="2">ವರ್ಷ</th><th colspan="2">Criminal Breach of Trust</th><th colspan="2">C.C. Notes</th><th colspan="2">Cheating</th></tr>
<tr><th>ವರದಿ</th><th>ಪತ್ತೆ</th><th>ವರದಿ</th><th>ಪತ್ತೆ</th><th>ವರದಿ</th><th>ಪತ್ತೆ</th></tr>
<tr><td>2022</td><td>461</td><td>359</td><td>29</td><td>13</td><td>6412</td><td>5054</td></tr>
<tr><td>2023</td><td>508</td><td>312</td><td>27</td><td>9</td><td>6927</td><td>4484</td></tr>
<tr><td>2024</td><td>570</td><td>180</td><td>30</td><td>13</td><td>6574</td><td>1781</td></tr>
</table>
</td></tr>
<tr><td>ಆ)</td><td>ಸೈಬರ್ ಅಪರಾದ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವ ಬೆಂಗಳೂರು ನಗರದಲ್ಲಿ ಎಷ್ಟು ಸೈಬರ್ ಮತ್ತು ಆರ್ಥಿಕ ಅಪರಾಧಗಳು ಕಂಡು ಬಂದಿವೆ. ಎಲ್ಲೆಲ್ಲಿ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾತದೆ:</td><td>
ಬೆಂಗಳೂರು ನಗರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸೈಬರ್ ಅಪರಾಧಗಳ ಕುರಿತಂತೆ ಐಟಿ ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ:-<br>
ಐಟಿ ಕಾಯ್ದೆ (ಸೈಬರ್ ಅಪರಾಧಗಳು)
<table>
<tr><th rowspan="2">ವರ್ಷ</th><th>ಐಟಿ ಕಾಯ್ದೆ (ಸೈಬರ್ ಅಪರಾಧಗಳು)</th></tr>
<tr><th>ವರದಿ</th></tr>
<tr><td>2022</td><td>10036</td></tr>
<tr><td>2023</td><td>17733</td></tr>
<tr><td>2024</td><td>17702</td></tr>
</table>
</td></tr>
</table>

<table>
<tr>
<td></td>
<td></td>
<td>
ಆರ್ಥಿಕ ಅಪರಾಧಗಳು (Economic Offences)<br>ದಾಖಲಾದ ಪ್ರಕರಣಗಳ ಸಂಖ್ಯೆ
<table>
<tr><th>ವರ್ಷ</th><th>Criminal Breach of Trust</th><th>C.C. Notes</th><th>Cheating</th></tr>
<tr><td>2022</td><td>148</td><td>16</td><td>2905</td></tr>
<tr><td>2023</td><td>184</td><td>19</td><td>3474</td></tr>
<tr><td>2024</td><td>217</td><td>11</td><td>3039</td></tr>
</table>
ಬೆಂಗಳೂರು ನಗರದಾದ್ಯಂತ ಸೈಬರ್ ಮತ್ತು ಆರ್ಥಿಕ ಅಪರಾಧಗಳನ್ನು ತಡೆಗಟ್ಟುವ ದೃಷ್ಟಿಯಿಂದ ಎಲ್ಲಾ ವಿಭಾಗಗಳಲ್ಲಿ ತಲಾ ಒಂದರಂತೆ ಒಟ್ಟು 8 ಸೆನ್ ಪೊಲೀಸ್ ಠಾಣೆ ಮತ್ತು 1 ಸೈಬರ್ ಪೊಲೀಸ್ ಠಾಣೆಯನ್ನು (ಒಟ್ಟು 9) ತೆರೆಯಲಾಗಿದ್ದು, ಇದರಿಂದ ಸೈಬರ್ ಅಪರಾಧ ಹಾಗೂ ಆರ್ಥಿಕ ಅಪರಾಧ ಪ್ರಕರಣಗಳನ್ನು ಶೀಘ್ರವಾಗಿ ಪತ್ತೆಹಚ್ಚಲು ಅನುಕೂಲವಾಗಿದೆ.
</td>
</tr>
<tr>
<td>ಇ)</td>
<td>ಎಲ್ಲಾ ಠಾಣೆಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ಸಾಧನ ಸಲಕರಣೆ ಮತ್ತು ಯಂತ್ರೋಪಕರಣಗಳು ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆಯೇ:</td>
<td>
ರಾಜ್ಯದಲ್ಲಿನ ಪೊಲೀಸ್ ಠಾಣೆಗಳಿಗೆ ಸೈಬರ್ ಅಪರಾಧ ಪ್ರಕರಣಗಳ ತನಿಖೆಯನ್ನು ನಿರ್ವಹಿಸಲು ಅಗತ್ಯವಿರುವ ಸಿಬ್ಬಂದಿ ಮತ್ತು ಈ ಕೆಳಕಂಡ ಸಾಧನ ಸಲಕರಣೆ ಮತ್ತು ಯಂತ್ರೋಪಕರಣಗಳನ್ನು ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸಲಾಗಿರುತ್ತದೆ:-
<ul>
<li>Cellebrite UFED 4 PC + Chinex Kit + Cabinet Kit,</li>
<li>Magnite Axiom,</li>
<li>Access Data FTK .</li>
<li>Quick Heal Antivirus,,</li>
<li>Pilican Case ,</li>
<li>10 KVA APC With 16 Batteries,</li>
<li>Dell 24 Inch LED Monitor ,</li>
<li>Tableau Write Blocker Kit,</li>
<li>MH ANT Analyser</li>
</ul>
<ul>
<li>ಸಿಐಡಿ ಘಟಕದಲ್ಲಿ ಸುಸಜ್ಜಿತವಾದ ನ್ಯಾಯವಿಜ್ಞಾನ ಪ್ರಯೋಗಾಲಯವು ಕಾರ್ಯನಿರ್ವಹಿಸುತ್ತಿದ್ದು, ಸೈಬರ್ ಕ್ರೈಂ ಆಪರಾಧಗಳಲ್ಲಿ ತನಿಖೆಗೆ ಸಂಬಂಧಿಸಿದಂತೆ ತಾಂತ್ರಿಕ ನೇರವು ನೀಡಲಾಗುತ್ತಿದೆ.</li>
<li>ಸಿಐಡಿ ಕಛೇರಿಯ ಸಿ.ಎಫ್.ಯು ವಿಭಾಗದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ಪ್ರಕರಣಗಳಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದ್ದು, ಸದರಿ ಸಿ.ಎಫ್.ಯು ವಿಭಾಗದಲ್ಲಿ Magnet AXIOM, Belkasoft evidence center X, Cellbrite Digital Collector (Mac Forensic) Cellbrite Inspector (Mac Forensic),Oxygen forensic detective, UFED4PC, Hunchly, Merkle science, Pasware kit Forensic</li>
</ul>
</td>
</tr>
</table>

<table>
<tr><td></td><td></td><td>ಮುಂತಾದ ಸಾಫ್ಟವೇರ್‌ಗಳನ್ನು ತಾಂತ್ರಿಕ ವಿಶ್ಲೇಷಣೆಗಾಗಿ ಸೈಬರ್ ಕ್ರೈಂ ಪ್ರಕರಣಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.</td></tr>
<tr><td>ಈ)</td><td>ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲು ಅಗತ್ಯವಿರುವ ತಾಂತ್ರಿಕ ಪರಿಣಿತರು, ಮಾಹಿತಿ ತಂತ್ರಜ್ಞರ ಸೇವೆ ಅವಶ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಅಂತಹ ಪರಿಣತರನ್ನು ನೇಮಕ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು?</td><td>ಸೈಬರ್ ಅಪರಾಧಗಳ ತನಿಖೆಗೆ ವಿಶೇಷ ತಾಂತ್ರಿಕ ಪರಿಣಿತರ ನೇಮಕ ಮತ್ತು ಸಿಬ್ಬಂದಿಗಳಿಗೆ ವಿಶೇಷ ತರಬೇತಿ ನೀಡಲು ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಕಂಡಂತಿದೆ :-<br><br><u>ಸಿಐಡಿ ವಿಭಾಗ-</u><br><br>➢ ಸೈಬರ್ ಅಪರಾಧಗಳ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲು ಸಿಐಡಿ ಘಟಕದ ಸಿಸಿಡಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿ.ಎಫ್.ಯು ಘಟಕದಲ್ಲಿ ಇಬ್ಬರು ನುರಿತ ತಾಂತ್ರಿಕ ತಜ್ಞರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br>➢ ಸದರಿಯವರುಗಳು ಸಿಸಿಡಿ ವಿಭಾಗದ ಸೈಬರ್ ಅಪರಾಧ ಪ್ರಕರಣಗಳಲ್ಲಿ ಹಾಗೂ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಜಪ್ತಿಪಡಿಸಲಾದ ಡಿಜಿಟಲ್ ಉಪಕರಣಗಳನ್ನು ತಾಂತ್ರಿಕ ವಿಶ್ಲೇಷಣೆ ಕೈಗೊಂಡು ತಾಂತ್ರಿಕ ಸಹಾಯವನ್ನು ಒದಗಿಸುತ್ತಿರುತ್ತಾರೆ.<br>➢ ಸಿಐಡಿಯ ಕಛೇರಿಯ Centre for Cybercrime Investigation Training & Research (CCITR) ವಿಭಾಗದಲ್ಲಿ 2019 ಸಾಲಿನಿಂದ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ಹಲವಾರು ತರಬೇತಿಗಳನ್ನು ನೀಡಲಾಗುತ್ತಿರುತ್ತದೆ.<br>➢ ಹ್ಯಾಕಿಂಗ್ ಹಾಗೂ ಇತರೆ ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು Drone Forensics, RAID Forensics, Wearable device forensics, Cloud forensics, Crypto currency tracing and investigation ನಂತಹ ಸುಧಾರಿತ ತರಬೇತಿಗಳನ್ನು ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಅಧಿಕಾರಿ/ಸಿಬ್ಬಂದಿಗಳಿಗೆ ವಿಶೇಷ ತರಬೇತಿಗಳನ್ನು ಸಹ ನೀಡಲಾಗುತ್ತಿರುತ್ತದೆ.<br><br>2024ನೇ ಸಾಲಿನಿಂದ ಈವರೆಗೆ ಆಯೋಜಿಸಿರುವ ತರಬೇತಿಯ ವಿವರಗಳು:-
<table>
<tr><th>ಸೈಬರ್ ಅಪರಾಧ ತರಬೇತಿ</th><th>ತರಬೇತಿ ಪಡೆದವರ ಸಂಖ್ಯೆ</th></tr>
<tr><td>ಕರ್ನಾಟಕ ರಾಜ್ಯ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧ ಬಗ್ಗೆ ಲೆವಲ್-1, ಲೆವಲ್-2 ಹಾಗೂ ಆಧುನಿಕ ಸುಧಾರಿತ ತರಬೇತಿ</td><td>1938</td></tr>
<tr><td>ಕರ್ನಾಟಕ ರಾಜ್ಯ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧ ಬಗ್ಗೆ ಆನ್‌ಲೈನ್ ತರಬೇತಿ</td><td>7457</td></tr>
<tr><td>ಒಟ್ಟು</td><td>9395</td></tr>
</table>
</td></tr>
</table>

| | | |
|---|---|---|
| | | **<u>ಬೆಂಗಳೂರು ನಗರ:-</u>**<br>08 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹಾಗೂ 08 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಒಟ್ಟು 16 ಸೈಬರ್ ತಾಂತ್ರಿಕ ತಜ್ಞರನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನಿಯೋಜಿಸಲು ಆದೇಶ ನೀಡಲಾಗಿರುತ್ತದೆ.<br>ಅದರಲ್ಲಿ 06 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಹುದ್ದೆಗೆ 02 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹುದ್ದೆಗೆ ಒಟ್ಟು 08 ತಾಂತ್ರಿಕ ತಜ್ಞರನ್ನು ಪೊಲೀಸ್ ಆಯುಕ್ತರು ಬೆಂಗಳೂರು ನಗರ ಘಟಕಕ್ಕೆ ನೇಮಕ ಮಾಡಲಾಗಿರುತ್ತದೆ. |

ಸಂಖ್ಯೆ:ಹೆಚ್‌ಡಿ 19 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು